(*c*) The arrears of takavi are being recovered consistent with the annewari orders in the normal course. No special orders have been issued for recovery of takavi dues in Ramadurg Taluk.

ಶ್ರೀ ಕಾಂತರಾವ್.—ಬರಗಾಲ ಪರಿಸ್ಥಿತಿ ಕೆಲವು ಗ್ರಾಮಗಳಲ್ಲಿದೆಯೆಂದ ಮೇಲೆ ಏನು ಮಾಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಾಮದುರ್ಗ ತಾಲ್ಲೂಕಿನಲ್ಲಿ ಸುಮಾರು ಮೂರು ವರ್ಷಗಳಿಂದ ಬರಗಾಲವಿದೆ. ಕಳೆದ ವರ್ಷ ಹೆಚ್ಚು ಮಳೆಯಾಗಿದ್ದರೂ ಸಕಾಲದಲ್ಲಿ ಆಗದೆ ಕೆಲವುಕಡೆ ಬೆಳೆಕೆಟ್ಟಿತ್ತು. ಆದುದರಿಂದ ಸರ್ಕಾರ ಸುಮಾರು ಐದು ಕಡೆ ರಸ್ತೆ ಕಾಮಗಾರಿಗಳನ್ನು ಮಂಜೂರುಮಾಡಿ ಒಂದು ಲಕ್ಷ ಎಂಟು ಸಾವಿರ ರೂಪಾಯಿ ಒದಗಿಸಿದ್ದರಲ್ಲಿ, ಅದರಲ್ಲಿ ಎಪ್ಪತ್ತು ಸಾವಿರ ರೂಪಾಯಿ ಖರ್ಚಾಗಿದೆ. ಗುತ್ತಿಗೋಳಿ ಮೈನರ್ ಟ್ಯಾಂಕ್‌ನಲ್ಲಿ 1,76,000 ರೂಪಾಯಿಗಳ ಅಂದಾಜು ಮಾಡಿದೆ. ಈ ಕಾಮಗಾರಿಯಿಂದ ಸುಮಾರು ಎರಡು ಸಾವಿರ ಜನರಿಗೆ ಕೆಲಸ ದೊರಕುತ್ತದೆ. ಎಲ್ಲೆಲ್ಲಿ ಅಭಾವ ಪರಿಸ್ಥಿತಿಯಿದೆಯೋ ಅಲ್ಲಿ ಅರ್ಧ ಮತ್ತು ಪೂರ್ತ ಕಂದಾಯ ನಸ್ಪೆಂಡ್ ಮಾಡಿದೆ. ಇನ್ನಾವುದಾದರೂ ಕ್ರಮ ಕೈಕೊಳ್ಳಬೇಕಾದರೆ ಅದನ್ನು ಮಾನ್ಯ ಸದಸ್ಯರು ಹೇಳಿದರೆ, ಅದನ್ನು ನಾನು ನೋಡಿ ಸೂಕ್ತ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡ.—ಮಳೆ ಬಾರದಿರುವ ಇತರ ಜಾಗಗಳ ವಿಚಾರವನ್ನೂ ಸಹ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಈ ಪ್ರಶ್ನೆ ರಾಮದುರ್ಗ ತಾಲ್ಲೂಕಿಗೆ ಮಾತ್ರ ಸಂಬಂಧಪಟ್ಟಿದೆ. ಆ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯವನ್ನು ಕೇಳಿದರೆ ಹೇಳಲು ಸಿದ್ಧನಾಗಿದ್ದೇನೆ.

Sri C. J. MUCKANNAPPA.—In view of the information given by the Member coming from that area and the agitation to postpone the recovery of the takkavi loan, will the Government consider the same ?

Sri M. V. KRISHNAPPA.—Sir, takkavi loan is collected from the villagers where there is no scarcity condition. In Ramadurg there are 111 villages and only forty-three villages have suffered from scarcity. In those villages there is no question of collection of takkavi. If the Hon'ble Member gives specific instances, I shall look into them.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆಣೆವಾರಿ ಎಂದರೇನು ?

ಶ್ರೀ ಎಂ. ವಿ. ಕೃಷ್ಣಪ್ಪ.— ಆಣೆವಾರಿ ಎಂದರೆ ಹಳ್ಳೀ ಮೈಸೂರಿನಲ್ಲಿ ಪಹಣಿ ಎಂದು ಹೇಳುವುದು. ಆರಾಣೆ ಬೆಳೆ, ಎಂಟಾಣೆ ಬೆಳೆ ಎಂದು ಎಷ್ಟು ಬೆಳೆಯಾಯಿತೆಂದು ಹೇಳುವುದಕ್ಕೆ ಆಣೆವಾರಿ ಎಂದು ಹೇಳಬಹುದು.

Famine conditions in Yelburga and Kushtagi Taluks.

*Q.—105. Sri VEERABHADRAPPA ERAPPA (Yelburga).—

Will the Government be plesed to state :—

(*a*) whether it has come to their notice that Yelburga and Kushtagi Taluks have been subject to famine continuously from three years ;

(*b*) whether they are aware that people are evacuating these places on account of famine ;

(*c*) whether they intend to take early action to provide employment to the people and arrange to supply food-grains to coolies ;

(*d*) if so, the details of the arrangements proposed to be made in this connection ?

*A.—Sri M. V. KRISHNAPPA (Minister for Revenue and Excise).—

(*a*) No. Seasonal conditions in Kushtagi and Yelburga Taluks were however not satisfactory during the last three years and conditions akin to scarcity prevailed in these Taluks.

(*b*) Whenever the seasonal conditions are not satisfactory in a particular area, the agricultural labourers and small land-holders move to other areas in search of employment.

(*c*) In order to provide employment to the people in the affected areas, necessary relief works have been taken up in both the Talukas. During the year 1960-61 food-grains were supplied through Co-operative Societies and fair price depots were also opened. In 1961-62 as food-grains were freely available, no fair price shops were opened.

(*d*) The following relief measures have been undertaken in these two taluks.

(1) Suspension of land revenue wherever necessary in the affected areas.
(2) Opening of relief works.
(3) Advancing Takavi loans for well sinking, purchase of bullocks, etc.

ಶ್ರೀ ವೀರಭದ್ರಪ್ಪ ಈರಪ್ಪ.—ಈ ಎರಡು ತಾಲ್ಲೂಕುಗಳಿಂದ ಎಷ್ಟು ಜನರು ಸ್ಥಳ ಬಿಟ್ಟುಹೋಗಿದ್ದಾರೆಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಬಗ್ಗೆ ವಿವರವಾದ ಲೆಕ್ಕವಿಲ್ಲ. ಆದರೆ ನಮಗೆ ತಿಳಿದುಬಂದಿರುವಂತೆ ಬರ ಇರುವಾಗ ಸಾಮಾನ್ಯವಾಗಿ ಜನರು ಅಕ್ಕಪಕ್ಕದ ಪ್ರಾಂತಗಳಿಗೆ ಕೆಲಸ ಹುಡುಕಿಕೊಂಡು ಹೋಗುತ್ತಾರೆ. ಈಗ ರಾಯಚೂರಿನಲ್ಲಿ ನಾಲೆ ಕೆಲಸ ನಡೆಯುತ್ತಿದೆ. ಅಲ್ಲಿಗೆ ಜನ ಹೋಗುತ್ತಾರೆ. ಈ ಲೆಕ್ಕ ಯಾವ ಸರ್ಕಾರಕ್ಕೂ ಗೊತ್ತಿರುವುದಿಲ್ಲ.

ಶ್ರೀ ವೀರಭದ್ರಪ್ಪ ಈರಪ್ಪ.—ಈ ವರ್ಷ ಆಹಾರ ಧಾನ್ಯಗಳ ಅಭಾವ ಹೆಚ್ಚಿರುವುದರಿಂದ ಹೋದ ವರ್ಷಕ್ಕಿಂತ ಬೆರೆ ಹೆಚ್ಚಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ರಬಿ ಬೆಳೆ ಕೆಟ್ಟಾಗ ಜೋಳದ ಬೆಳೆಯ ಅಭಾವವಾಗುವುದುಂಟು. ಈ ಅಧಿವೇಶನ ಮುಗಿದನಂತರ ನಾನು ಆ ಕಡೆ ಪ್ರವಾಸ ಮಾಡುವವನಾಗಿದ್ದೇನೆ. ಆಗ ನೋಡಿ ಬಹಳ ತೊಂದರೆಯಾಗಿದೆಯೆಂದು ಕಂಡರೆ ಬೇಕಾದಷ್ಟು ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಲು ಏರ್ಪಾಡು ಮಾಡಲಾಗುತ್ತದೆ. ನಮ್ಮಲ್ಲಿ ಬೇಕಾದಷ್ಟು ಆಹಾರ ಪದಾರ್ಥಗಳಿವೆ.

ಶ್ರೀಮತಿ ಬನವರಾಜೇಶ್ವರಿ.—ಯಲಬುರ್ಗ ತಾಲ್ಲೂಕಿನಲ್ಲಿ ನೀರಿನ ಅಭಾವ ವಿರುವುದರಿಂದ ಕೆರೆ ದುರಸ್ತು ಕೆಲಸ ಕೈಕೊಳ್ಳುವಂತೆ ಡೆಪ್ಯುಟಿ ಕಮಿಷನರಿಗೆ ತಿಳಿಸಲಾಗುವುದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಳೆದ ಎರಡು ಮೂರು ವರ್ಷಗಳಿಂದ ನೋಡಿದಂತೆ ರಸ್ತೆ ಹೆಚ್ಚಾಗಿ ಮಾಡಿದರೆ ಅವನ್ನು ಸರಿಯಾದ ಸ್ಥಿತಿಯಲ್ಲಡಬೇಕಾಗುತ್ತದೆ. ಅದಕ್ಕೆ ಬದಲಾಗಿ ರಸ್ತೆಗೆ ಹೆಚ್ಚು ಹಣ ಖರ್ಚುಮಾಡುವುದಕ್ಕಿಂತ ಕೆರೆ, ಬಾವಿಗಳಿಗಾಗಿ ಖರ್ಚು ಮಾಡಿದರೆ ಖಾಯಂ ಪರಿಹಾರ ದೊರೆತು ಬರಬಾರದಂತೆ ಆಗಿ ಅನುಕೂಲವಾಗುತ್ತದೆ ಎಂದು ತಿಳಿದು ಹಾಗೆ ಮಾಡುವುದು ಉತ್ತಮ ಎಂದು ಬಾವಿ, ಕೆರೆ ಕೆಲಸಕ್ಕೆ ಪ್ರಾಶಸ್ತ್ಯಕೊಟ್ಟು ಫರ್ಮನೆಂಟ್ ಅಸೆಟ್ ಆಗುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ಈ ವಿಚಾರದಲ್ಲಿ ಡಿವಿಜನಲ್ ಕಮಿಷನರ್, ಡೆಪ್ಯುಟಿ ಕಮಿಷನರ್ ಮುಂತಾದ ಆಫೀಸರುಗಳ ಗಮನವನ್ನು ಸೆಳೆದಿದ್ದೇವೆ.

ಶ್ರೀಮತಿ ಬನವರಾಜೇಶ್ವರಿ.—ಗುಲ್ಬರ್ಗ ಜಿಲ್ಲೆಗೆ ಬರಗಾಲ ಪರಿಹಾರಕ್ಕಾಗಿ ಎಷ್ಟು ಹಣ ಕೊಡಲಾಗಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ಬೇಕಾದರೂ ಕೊಡುತ್ತೇವೆ. ಬರಗಾಲ ಕಾಂಗಾರಿಗೆ ಎಷ್ಟು ಬೇಕೋ ಅಷ್ಟನ್ನು ಮಂಜೂರು ಮಾಡುತ್ತೇವೆ.

Sri ANNA RAO GANAMUKHI.—May I know the amount of takavi loans that is sanctioned to this taluk ?

ಶ್ರೀ ಎಂ. ವಿ. ಕೃಷ್ಣಪ್ಪ.—ಕುಷ್ಟಗಿ ತಾಲ್ಲೂಕಿಗೆ 2,24,000 ರೂಪಾಯಿಗಳು, ಯಲಬುರ್ಗಿ ತಾಲ್ಲೂಕಿಗೆ 3,69,000 ರೂಪಾಯಿಗಳನ್ನು, ಕೊಡಲಾಗಿದೆ.

ಶ್ರೀಮತಿ ಸುಶೀಲಾಬಾಯಿ ಹಿರಾಚಂಡ್‌ಷಾ.—ಬರಗಾಲ ಕಾಂಗಾರಿಗೆ ಎಂದು ಬಾವಿ, ಕೆರೆಗಳಿಗಾಗಿ ಕೊಡುವ ಹಣ ಸರಿಯಾಗಿ ಪಾವತಿಯಾಗಿ ಸದುಪಯೋಗವಾಗುತ್ತಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿಗಳನ್ನು ಜನರು ತಮ್ಮ ಜಮೀನುಗಳಲ್ಲಿ ತೆಗೆದುಕೊಳ್ಳುತ್ತಾರೆ ಅವನ್ನೇನೂ ನೋಡಬೇಕಾಗಿಲ್ಲ. ಈಗ ಕೇಂದ್ರದಿಂದ ಪ್ರತಿಯೊಂದು ತಾಲ್ಲೂಕಿಗೂ ಹಣ ಕೊಟ್ಟು ಕೆಲಸ ನಡೆಸಲು ಅವಕಾಶವಾಗುವಂತೆ ದೆಹಲಿಯಲ್ಲಿ ಇಂಜಿನಿಯರನ್ನು ನೇಮಕಮಾಡಿ ಒಂದು ಲಿಸ್ಟ್ ಮಾಡಿದ್ದಾರೆ.

ಶ್ರೀ ಶರಣಪ್ಪ.—ಈಗ ಈ ಬಾಬತು ಹಣ ಒದಗಿಸಿ ಕೆಲಸ ನಡೆಯುತ್ತಿರುವ ಬಗ್ಗೆ ವರದಿ ಬರುತ್ತಿದೆಯೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಧಿಕಾರಿಗಳಿಂದ ಬರುತ್ತಿದೆ. ನಾನೂ ಹೋಗಿ ನೋಡಿಕೊಂಡು ಬರುತ್ತೇನೆ, ಎಷ್ಟು ಕೆಲಸ ಅವಶ್ಯಕವೋ ಅಷ್ಟನ್ನು ಮಾಡಿ ಎಂದು ಹೇಳಿದೆ.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಕ್ಷಾಮ ನಿವಾರಣಾ ಕೆಲಸವನ್ನು ಪ್ರಾರಂಭಿಸುವಾಗ ಕೂಲಿ ಇಷ್ಟು ಕೊಡಬೇಕೆಂದು ನಿಗದಿಮಾಡಿದ್ದೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಿನಿಮಂ ವೇಜಸ್ ನಿಗದಿ ಮಾಡಿದೆ. ಹೆಂಗಸರಿಗೆ 12 ಆಣೆಗಳಿಗಿಂತ ಕಡಮೆ ಕೊಡಬಾರದು, ಜಾಸ್ತಿ ಬೇಕಾದರೆ ಕೊಡಬಹುದು.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ನಮ್ಮ ತಾಲ್ಲೂಕಿನಲ್ಲಿ ಏಳು ರೂಪಾಯಿಗಳನ್ನು ಕೊಡಬೇಕಾದ ಕೆಲಸಕ್ಕೆ ಮೂರು ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಬಹಳ ಅನ್ಯಾಯ, ಆದುದರಿಂದ ಸರಿಯಾದ ಕೂಲಿ ಕೊಡುವಂತೆ ನೋಟಿನೆ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೊಡೋಣ.

Sri J. P. SARWESH.—Will the Government issue orders to district officers to sanction loans to small holders to sink wells without insisting on the security for the loan ?

Sri M. V. KRISHNAPPA.—Sir, it is too general a question. As you know, in India, 80 per cent of the land holders have less than five acres of land. So, whatever loan we give, it will be taken away by those who possess more than five acres. I did take personally this matter to the Reserve Bank but they want some security. In my opinion, the well itself is a security whether the loanee has one acre or two acres of land. We are trying our best to convince the Reserve Bank.

2-00 P.M.

ಶ್ರೀ ಎಸ್. ಶಿವಪ್ಪ.—ಸರ್ಕಾರದವರು ಕೊಡತಕ್ಕ ಸೌಲಭ್ಯಗಳು ಮಾನ್ಯ ಮಂತ್ರಿಗಳು ಹೇಳಿದಹಾಗೆ ಬಡವರಿಗೆ ಸಿಕ್ಕಬೇಕು. ಆದರೆ ಕಾನೂನು ಪ್ರಕಾರ ಅವರಿಗೆ ಸೌಲಭ್ಯ ಸಿಕ್ಕುವುದು ಅಸಾಧ್ಯವಾಗಿರುವುದರಿಂದ ದಯವಿಟ್ಟು ಬಾವಿಯನ್ನೇ ಸೆಕ್ಯೂರಿಟಿ ತಗೆದು ಕೊಂಡು ಸಾಲವನ್ನು ಮಂಜೂರು ಮಾಡತಕ್ಕ ಪದ್ಧತಿಯನ್ನು ಜಾರಿಗೆ ತರತಕ್ಕ ಅಭಿಪ್ರಾಯವನ್ನು ಯೋಚನೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ವಿಚಾರದಲ್ಲಿ ನಾನೂ ಪರವಾಗಿ ಇದ್ದೇನೆ. ರಿಜರ್ವ್ ಬ್ಯಾಂಕಿನವರು ಹಣ ಕೊಟ್ಟು ಬಾವಿಯನ್ನು ತೋಡಿದ ಮೇಲೆ ಅದು ಸೆಕ್ಯೂರಿಟಿ ಬರುತ್ತದೆ. ಬಾವಿಯನ್ನು ತೋಡದೆ ಅದನ್ನು ಸೆಕ್ಯೂರಿಟಿ ತಗೆದುಕೊಂಡರೆ ಅದರಿಂದ ತೊಂದರೆಯಾಗುತ್ತದೆ. They are also agreeable to this proposal.

ಶ್ರೀ ಜಿ. ವೆಂಕಟೇಗೌಡ.—ಬರಗಾಲ ಪರಿಸ್ಥಿತಿ ಮತ್ತು ದುಸ್ಥಿತಿಯನ್ನು ನಿರ್ಣಯಮಾಡಲಕ್ಕೆ ಬೇಕಾದ ನೀತಿ ನಿಯಮಗಳನ್ನು ನಮ್ಮ ದೇಶಕ್ಕೆಲ್ಲಾ ಅನ್ವಯ

ವಾಗುವಂತೆ ಮಾಡಿದ್ದೀರಾ ? ಒಂದು ವೇಳೆ ಅದನ್ನು ಮಾಡದಿದ್ದರೆ ಮಾಡುವುದಕ್ಕೆ ಪ್ರಯತ್ನಮಾಡುತ್ತೀರಾ? ಮದ್ರಾಸ್ ಪ್ರದೇಶಕ್ಕೆ ಒಂದು ನೀತಿ ನಿಯಮ, ಮೈಸೂರಿಗೆ ಒಂದು ನೀತಿ ನಿಯಮ ಮತ್ತು ಹೈದರಾಬಾದ್ ಕರ್ನಾಟಕಕ್ಕೆ ಒಂದು ನೀತಿ ನಿಯಮ ಇದ್ದು ಅದನ್ನು ಸಮನ್ವಯ ಮಾಡದೆ ಇರುವುದರಿಂದ ಅನೇಕ ಜನಗಳಿಗೆ ಅದರಿಂದ ತೊಂದರೆಯಾಗುತ್ತಿದೆ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಜನರಲ್ ಪ್ರಶ್ನೆ ಆಯಿತು. ಈಗ ಪ್ರಶ್ನೆ ಇರುವುದು ಯಲಬುರ್ಗಿ ಮತ್ತು ಕುಷ್ಟಗಿ ತಾಲ್ಲೂಕುಗಳಿಗೆ ಸಂಬಂಧಪಟ್ಟದ್ದು.

ಶ್ರೀ ಎಂ. ಸಿ. ಬನಪ್ಪ.—ಎಷ್ಟು ಸಾಲವನ್ನು ತೆಗೆದುಕೊಳ್ಳುತ್ತಾರೆಯೋ ಅದರ ಎರಡರಷ್ಟು ಸೆಕ್ಯೂರಿಟಿ ಇರಬೇಕೆಂದು ಈಗ ಅಧಿಕಾರಿಗಳು ಹೇಳುತ್ತಿದ್ದಾರೆ. ಸಾಲವನ್ನು ಎಷ್ಟು ತೆಗೆದುಕೊಳ್ಳುತ್ತಾರೆಯೋ ಅಷ್ಟು ಸೆಕ್ಯೂರಿಟಿ ಕೊಟ್ಟರೆ ಸಾಕು ಎಂದು ಹೇಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಸಾಮಾನ್ಯವಾಗಿ ಲೋಕಲ್ ಆಫೀಸರ್ಸ್ ಮೇಲೆ ಹೋಗುತ್ತದೆ. ಗೌರ್ನಮೆಂಟ್ ಆರ್ಡರ್ಸ್ ಜಾರಿಗೆ ತರುವುದರಲ್ಲಿ ಲೋಕಲ್ ಆಫೀಸರ್ಸ್ ಥೈರ್ಯಸ್ಥರು ಇದ್ದರೆ ಕೊಡುತ್ತಾರೆ. ಆದರೆ orders are always there.

Mr. SPEAKER.—Question hour is over.

QUESTIONS FOR ANSWERS ON THE DAY

(but not taken up)

Commencement of the road work from Holenarasipur to Keralapur.

*Q.—99. Sri H. D. DEVE GOWDA (Holenarasipur).—

Will the Government be pleased to state :—

(*a*) the reasons for not commencing the road work from Holenarasipur to Keralapur for which sanction has alerady been accorded ;

(*b*) the steps taken by them to complete this work ?

A.— Sri VEERENDRA PATIL (Minister for Public Works and Transport).—

(*a*)(i) Fixing of agency for execution of the work ;

(ii) Difficulty in securing villagers' contribution.

(*b*) Necessary instructions have been issued to the Chief Engineer to take up the work on hand immediately.

Publication of the "Mysore Gazetteer"

*Q.—111. Sri A. S. PATIL (Nargund).—

Will the Government be pleased to state :—

(*a*) whether it is a fact that the work in bringing out the "Mysore Gazetteer" is delayed ;

(*b*) the progress so far made from the date of its commencement ;

(*c*) the steps they propose to take to expedite its publication ?

A.—Sri S. R. KANTHI (Chief Minister).—

(*a*) No.

(*b*) Seven District Gazetteers have been compiled and work on the two more is in progress.

(*c*) The work of publication of the completed Gazetteers is to be taken up shortly. Compilation of the Gazetteers for the remaining Districts is proposed to be completed by the end of the Third Five-Year Plan and additional staff has also been appointed recently.

Taking over of Rural Communication Roads under the Public Works Department.

*Q.—143. Sri D. M. SIDDAIAH (Biligere).—

Will the Government be pleased to state :—

(*a*) the policy pursued by the P.W.D. to take over the Rural Communication Roads under the Public Works Department ;

(*b*) the length of such roads taken over by the P.W.D. in Mysore District;

(*c*) the number of miles that have been taken over in each Taluk of the said District ;

(*d*) whether they will take steps to include all these roads, in each Taluk of the District, under the P.W.D.?

A.—Sri VEERENDRA PATIL (Minister for Public Works and Transport).—

(*a*) Nil.

(*b*), (*c*) and (*d*) Do not arise in view of replyto cluase (*a*).